ಸತ್ರ ಪ್ರಕರಣ ಸಂಖ್ಯೆಃ

| | |
|---|---|
| ಫ್ರಾಸಾ | 11 |
| ಚಾಸಾ | 03 |

ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆಃ57)
ನಮೂನೆ ಸಂಖ್ಯೆ4
(ಸಿವಿಲ್)

**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ**

**ಸತ್ರ ಪ್ರಕರಣ ಸಂಖ್ಯೆಃ 27/2025**

**ದಿನಾಂಕಃ04.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಡಾ.ಬೈರಾ ರೆಡ್ಡಿ ಬಿ.ಎನ್. |
| ತಂದೆಯ ಹೆಸರು | : | ಲೇಟ್ ಬಿ.ನಾರಾಯಣ ರೆಡ್ಡಿ |
| ವಯಸ್ಸು | : | 75 ವರ್ಷ |
| ಉದ್ಯೋಗ | : | ವೈದ್ಯರು ಚಿಂತಾಮಣಿ ಡೆಕನ್ ಆಸ್ಪತ್ರೆ |
| ವಾಸಸ್ಥಳ | : | ಚಿಂತಾಮಣಿ |

**ಮುಖ್ಯ ವಿಚಾರಣೆಃ ಸಾರ್ವಜನಿಕ ಅಭಿಯೋಜಕರಿಂದಃ-**

**1.** ನಾನು 2011 ರಿಂದ ಇಲ್ಲಿಯವರೆಗೂ ಚಿಂತಾಮಣಿ ನಗರದ ಡೆಕನ್ ಆಸ್ಪತ್ರೆಯಲ್ಲಿ ವೈದ್ಯನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ನನಗೆ ಫ್ರಾಸಾ-1, ಚಾಸಾ-2 ರವರ ಪರಿಚಯ ಇದೆ. ಫ್ರಾಸಾ-2 ಮತ್ತು ಫ್ರಾಸಾ-7 ರವರನ್ನು ನೋಡಿರುತ್ತೇನೆ. ನ್ಯಾಯಾಲಯದ ಮುಂದಿರುವ

| | |
|---|---|
| ಫ್ರಾಸಾ | 11 |
| ಚಾಸಾ | 03 |

ಆರೋಪಿಯನ್ನು ನೋಡಿರುತ್ತೇನೆ. ದಿ.20-12-2018 ರಂದು ನಾನು ಚಿಂತಾಮಣಿ Indian Medical Association ಅಧ್ಯಕ್ಷನಾಗಿದ್ದಾಗ ತಹಸೀಲ್ದಾರ್ ರವರು ಕರೆದರು. ನಾನು ಅವರೊಂದಿಗೆ ಮೈಲಾಂಡ್ಲ ಹಳ್ಳಿಗೆ ಹೋದೇವು. ಅಲ್ಲಿ ಅನಧಿಕೃತವಾಗಿ ಕ್ಲಿನಿಕ್ ಅನ್ನು ಆರೋಪಿ ನಡೆಸುತ್ತಿದ್ದಾರೆ ಎಂದು ಕರೆದುಕೊಂಡು ಹೋದರು. ನಾನು ಹೋದಾಗ ಆರೋಪಿ ಮೈಲಾಂಡ್ಲ ಹಳ್ಳಿ ಯಎಲ್ಲಿರುವ ಕ್ಲಿನಿಕ್ ನಲ್ಲಿ ಸ್ಟೆತಸ್ಕೋಪ್, ಬಿಪಿ ಮೊನಿಟರ್ ಹಾಗೂ ಸಾಮಾನ್ಯ ಉಪಯೋಗಿಸುವ ಔಷಧಿಗಳನ್ನು ಇಟ್ಟುಕೊಂಡಿದ್ದರು. ಸದರಿ ದಿನ ಆರೋಪಿ ಕ್ಲಿನಿಕ್ ನಲ್ಲಿ ಇರಲಿಲ್ಲ. ಆದರೆ ತಹಸೀಲ್ದಾರ್ ರವರು ಆರೋಪಿಯನ್ನು ಕರೆಯಿಸಿ ನೋಡಿದಾಗ ಆತ ವೈದ್ಯರಾಗಿ ಉಪಯೋಗಿಸಿದ ವಸ್ತುಗಳು ಇದ್ದವು. ಸದರಿ ಸಮಯ DYSP ಪೋಲಿಸ್ ಅಧಿಕಾರಿ ಇದ್ದರು. ಅವರು ಸದರಿ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಕಾರಣ ಆರೋಪಿಯ ಬಳಿ ವೈದ್ಯ ವೃತ್ತಿ ನಡೆಸಲು ಲೈಸೆನ್ಸ್ ಇರಲಿಲ್ಲ. ಆರೋಪಿ ಖುದ್ದಾಗಿ ಚಿಕಿತ್ಸೆ ನೀಡುತ್ತಿರುವುದನ್ನು ನಾನು ನೋಡಿರುವುದಿಲ್ಲ. ಆದರೆ ಸ್ಥಳೀಯರು ಹೇಳಿರುತ್ತಾರೆ. ವಸ್ತುಗಳನ್ನು ಪ್ಯಾಕ್ ಮಾಡಿ ಸೀಲ್ ಮಾಡಿ ಅಮಾನತ್ತು ಪಡಿಸಿಕೊಂಡಿದ್ದರು. ಸದರಿ ಸ್ಥಳದಲ್ಲಿ ಬರೆದ ದಾಖಲೆಗೆ ನಾನು ಸಹಿ ಮಾಡಿರುತ್ತೇನೆ. ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ

ಗುರುತಿಸಿದ್ದು , ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿರುತ್ತದೆ. ಅದರಲ್ಲಿರುವ ಸಾಕ್ಷಿಯ ಮೂರು ಸಹಿಗಳನ್ನು ಒಟ್ಟಾಗಿ **ನಿಪಿ-2(ಐ)** ಎಂದು ಗುರುತಿಸಲಾಯಿತು.

3. ಸದರಿ ವಿಚಾರದ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ವಸ್ತುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮು.ಮಾ.01 ರಿಂದ ಮು.ಮಾ.43 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ಆರ್.ಬಿ. ವಕೀಲರಿಂದಃ**

ತಹಸೀಲ್ದಾರ್ ರವರು ನನಗೆ ಲಿಖಿತವಾಗಿ ನೋಟಿಸ್ ನೀಡಿರುವುದಿಲ್ಲ. ಸ್ಥಳಕ್ಕೆ ನಾನು ಹೋಗುವಷ್ಟರಲ್ಲಿ ಪೋಲಿಸರು ಅಲ್ಲಿ ಇರಲಿಲ್ಲ. ಮು.ಮಾ.01 ರಿಂದ ಮು.ಮಾ.43 ವಸ್ತುಗಳು ಮೈಲಾಂಡ್ಲ ಹಳ್ಳಿಯಲ್ಲಿ ಸಿಕ್ಕಿರುವ ವಸ್ತುಗಳು ಅಲ್ಲ ಎಂದರೆ ಸಾಕ್ಷಿಯು ಕೆಲವೊಂದನ್ನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿ ವೈದ್ಯ ವೃತ್ತಿ ಮಾಡುತ್ತಿದ್ದಾರೆ ಎಂದು ತಿಳಿಸಿದ ಸ್ಥಳೀಯರ ಹೆಸರು ನನಗೆ ಗೊತ್ತಿಲ್ಲ. ವಸ್ತುಗಳನ್ನು ಅಮಾನತ್ತು ಪಡಿಸಿಕೊಳ್ಳುವ ಪೂರ್ವದಲ್ಲಿ ತಹಸೀಲ್ದಾರ್ ರವರು

| | |
|---|---|
| ಪ್ರಾಸಾ | 11 |
| ಚಾಸಾ | 03 |

ಆರೋಪಿಯನ್ನು ಕರೆಸಿಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಸ್ಥಳಕ್ಕೆ ಹೋಗಿದ್ದೇವು ಎಂದು ಹೇಳಲಾದ ಅರ್ಧ ಗಂಟೆಯ ನಂತರ ಆರೋಪಿಯನ್ನು ತಹಸೀಲ್ದಾರ್ ರವರು ಕರೆಸಿದ್ದರು. ಸ್ಥಳಕ್ಕೆ ಆರೋಪಿ ಒಬ್ಬರೇ ಬಂದಿದ್ದರು. ಸದರಿ ದಿನ ನಾನು ಹೇಳಿದಂತೆ ಆರೋಪಿ ಸ್ಥಳಕ್ಕೆ ಬಂದಿರಲಿಲ್ಲ ಮತ್ತು ಇರಲಿಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ.</u>**

**(ದಿನಾಂಕಃ04.07.2026 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓದಿ ಹೇ ಕೇ ಸರಿ ಇದೆ**

**ಸಹಿ/-**

**(ಕಾಂತರಾಜು.ಎಸ್.ವಿ.)**
**2 ನೇ ಹೆಚ್ಚುವರಿ ಜಿಲ್ಲಾ ಮತ್ತು (ವಿಶೇಷ) ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ (ಕಾರ್ಯಸ್ಥಾನ ಚಿಂತಾಮಣಿ)**